

# ಟ್ರೆಂಡಿ ಶೂಗಳ ಮೋಡಿ!

■ ಪವಿತ್ರಾ ರಾಘವೇಂದ್ರ ಶೆಟ್ಟಿ

**ಉಡುಪು, ಒಡವೆಗಳಂತೆ ಶೂಗಳೂ ಈಗೀಗ ಫ್ಯಾಷನ್ ಲೋಕದಲ್ಲಿ ಟ್ರೆಂಡಿ ಎನಿಸಿವೆ. ಫ್ಲಿಪ್ ಫ್ಲಾಪ್ಸ್, ಹೀಲ್ಡ್ ಲೂಫರ್ಸ್, ಕ್ರಾಸ್ ಮ್ಯೂಲ್ಸ್ ಎಂದೆಲ್ಲ ಕರೆಸಿಕೊಳ್ಳುವ ಸ್ಟೈಲಿಶ್ ಶೂಗಳದ್ದೇ ಈಗ ಕಾಲ!**

ಇವತ್ತು ಇರುವ ಫ್ಯಾಷನ್ ನಾಳೆಗೆ ಬದಲಾಗುತ್ತದೆ. ಧರಿಸುವ ಬಟ್ಟೆಯಿಂದ ಹಿಡಿದು ಶೂವರೆಗೂ ಟ್ರೆಂಡ್‌ಗಳದ್ದೇ ಹವಾ. ಕೆಲಸಕ್ಕೆ ಹೋಗುವಾಗ, ಯಾವುದಾದರೂ ಪಾರ್ಟಿ, ಫಂಕ್ಷನ್‌ಗಳಿಗೆ ರೆಡಿಯಾಗುವಾಗ ಉಡುಪಿನಷ್ಟೇ ಪ್ರಾಮುಖ್ಯತೆ ಪಾದರಕ್ಷೆಗೂ ನೀಡಬೇಕಾಗುತ್ತದೆ. ಇದು ನಿಮಗೆ ಇನ್ನಷ್ಟು ಸ್ಟೈಲಿಶ್ ಲುಕ್ ಅನ್ನು ನೀಡುತ್ತದೆ. ಇನ್ನು ಆಯಾಯಾ ಋತುವಿಗೆ ತಕ್ಕಂತೆ ಚಪ್ಪಲಿಗಳನ್ನು ಬದಲಾಯಿಸುವುದು ಕೂಡ ಈಗ ಟ್ರೆಂಡ್ ಆಗಿದೆ.

ಇನ್ನು ಶಾಪಿಂಗೆಂದು ಹೋದಾಗ ಬಟ್ಟೆಯಷ್ಟೇ ಎಲ್ಲರ ಮನ ಸೆಳೆಯುವುದು ಹೊಸ ಹೊಸ ವಿನ್ಯಾಸದ ಶೂ, ಚಪ್ಪಲಿಗಳು. ಉಡುಪಿಗೆ ಹೊಂದಿಕೆಯಾಗುವಂತಹ ಪಾದರಕ್ಷೆಗಳನ್ನು ಧರಿಸಿದರೆ ನಿಮ್ಮ ಸೌಂದರ್ಯ ಮತ್ತಷ್ಟು ಹೆಚ್ಚಾಗುವುದು. ಇಂದು ಮಾರುಕಟ್ಟೆಯಲ್ಲಿ ನಾನಾ ಬಗೆಯ ಟ್ರೆಂಡಿ ಪಾದರಕ್ಷೆಗಳನ್ನು ನೋಡಬಹುದು. ಅದರಲ್ಲೂ ಶೂ ಅಂತೂ ಸಿಕ್ಕಾಪಟ್ಟೆ ಆಕರ್ಷಣೀಯವಾಗಿದೆ.

## ಚೈನ್ ಶೂ

ಒಂದೇ ರೀತಿಯ ಶೂ ಧರಿಸುವುದು ಬೇಜಾರು ಎನ್ನುವ ಫ್ಯಾಷನ್ ಪ್ರಿಯರಿಗಾಗಿ ಚೈನ್ ರೀತಿಯ ವಿನ್ಯಾಸ ಇರುವ ಶೂ ಕೂಡ ಲಭ್ಯವಿದೆ. ಇದು ನಿಮ್ಮ ಉಡುಪಿಗೆ ಮತ್ತಷ್ಟು ಮೆರುಗು ನೀಡುವುದು. ಪಾರ್ಟಿವೇರ್ ಡ್ರೆಸ್‌ಗಳಿಗೆ ಕೂಡ ಚೆನ್ನಾಗಿ ಹೊಂದಿಕೆಯಾಗುತ್ತದೆ. ಇದು ಸ್ಟಿಲರ್ ಹಾಗೂ ಗೋಲ್ಡ್ ಬಣ್ಣದ ದಪ್ಪಗಿನ ಚೈನ್ ಶೂ ನಿಮ್ಮ ಸೌಂದರ್ಯವನ್ನು ಮತ್ತಷ್ಟೂ ಹೆಚ್ಚಿಸುತ್ತದೆ. ಲೂಫರ್ಸ್, ಸ್ಯಾಂಡಲ್ಸ್‌ನಲ್ಲೂ ಈ ಚೈನ್‌ನ ವಿನ್ಯಾಸ ಮೋಡಿ ಮಾಡುವ ಹಾಗೇ ಇದೆ. ದಪ್ಪಗೆ ಹಾಗೂ ತೆಳ್ಳಗಿನ ಸರಪಳಿಯಂತಹ ವಿನ್ಯಾಸವಿರುವ ಶೂ ನೋಡುಗರನ್ನು ಸೆಳೆಯುವುದರ ಜತೆಗೆ ಪಾರ್ಟಿವೇರ್ ಹಾಗೂ ದಿನನಿತ್ಯದ ಉಡುಪುಗಳಿಗೂ ಹೊಂದಿಕೆಯಾಗುತ್ತದೆ.

## ಫ್ಲಿಪ್ ಫ್ಲಾಪ್ಸ್

ಇನ್ನು ಪಾದಕ್ಕೆ ಹೆಚ್ಚು ಹಿತವೆನಿಸುವ ಚಪ್ಪಲಿಗಳೆಂದರೆ ಈ ಫ್ಲಿಪ್ ಫ್ಲಾಪ್ಸ್. ಇದು ಹೆಚ್ಚು ಕಂಫರ್ಟ್ ನೀಡುತ್ತದೆ. ಹೀಲ್ಸ್ ಪಾದರಕ್ಷೆಗಳನ್ನು ಎಲ್ಲಾ ಸಮಯದಲ್ಲಿ ಬಳಸುವುದರಿಂದ ಪಾದದ ಮೇಲೆ ಪರಿಣಾಮ ಬೀರುತ್ತದೆ, ಇದರ ಬದಲು ಸ್ಟೈಲಿಶ್ ಜತೆಗೆ ಕಾಲಿಗೆ ಆರಾಮದಾಯಕವೆನಿಸುವ ಫ್ಲಿಪ್ ಫ್ಲಾಪ್ ಚಪ್ಪಲಿಗಳು ನಿಮ್ಮ ಪಾದದ ರಕ್ಷಣೆ ಮಾಡುವುದರ ಜತೆಗೆ ಪಾದದ ಸೊಬಗನ್ನು ಹೆಚ್ಚಿಸುತ್ತದೆ. ಇನ್ನು ಲಾಕ್‌ಡೌನ್ ಕಾರಣದಿಂದ ಮನೆಯಲ್ಲಿಯೇ ಕೆಲಸ